*ಕ್ರಿಸ್ತು ಜಯಂತಿ ಕನ್ನಡ ಸಂಶೋಧನಾ ಪತ್ರಿಕೆ*
(Kristu Jayanti Kannada Sanshodhana Patrike)
*ಸಂಪುಟ 1, ಸಂಚಿಕೆ 2, ಸೆಪ್ಟಂಬರ್ 2022, ಪುಟಗಳು 23 – 30*

# ತತ್ವಪದ ಸಾಹಿತ್ಯದಲ್ಲಿ ಸಂಸಾರ ಪಥದ ತಾತ್ವಿಕ ವಿವೇಚನೆ

**ಡಾ. ಗುರುರಾಜ್ ಹೆಚ್.**
ಅತಿಥಿ ಉಪನ್ಯಾಸಕರು
ಕರ್ನಾಟಕ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ,
ಸಿಂಧನೂರು

gururaj.morb@gmail.com

ಮಾನವನಲ್ಲಿ ಸಂಸಾರಿಕ ರಕ್ತಿ, ಆಸಕ್ತಿಗಳು ಸಹಜ ಮಾನವನ ವ್ಯಾಮೋಹ ಗುಣಗಳಿಂದ ಸಾಂಸಾರಿಕ ತಾಪತ್ರೆಯ ವಲಯದಲ್ಲಿ ಸಿಕ್ಕಿಹಾಕಿಕೊಳ್ಳುವುದು ಸಹಜ. ಸಂಸಾರದ ಸಂಘ ತೊರೆದು ಹೆಣ್ಣು, ಹೊನ್ನು, ಮಣ್ಣು, ಅಧಿಕಾರ ಚಾಪಲ್ಯಗಳನ್ನು ಬದಿಗೊತ್ತಿ ವೈರಾಗ್ಯದ ದಾರಿಯನ್ನು ಅರಿಯಬೇಕು ಎಂಬುದು ತತ್ವಪದಕಾರರ ಮಹತ್ವದ ಚಿಂತನೆಯಾಗಿತ್ತು. ಅತ್ಮೋನ್ನತ್ತಿಯನ್ನು ಸಾಧಿಸಲು ಸಾಂಸಾರಿಕ ಬಂಧವನ್ನು ಬಿಡಿಸಿಕೊಂಡು ವೈರಾಗ್ಯದ ಬದುಕಿಗೆ ನಾಂದಿಯಾಗಬೇಕು. ನೈಜ ಜ್ಞಾನಿಯಾಗಿ ವಿರಕ್ತಿಯಾಗಿ ಸಂಸಾರದ ಸ್ವಾರ್ಥ ಆಶಯಗಳನ್ನು ಬಿಟ್ಟು ಪಾರಮಾರ್ಥಿಕ ಜ್ಞಾನಕ್ಕಾಗಿ ಹಂಬಲಿಸಬೇಕು. ಸಂಸಾರಕ್ಕೆ ಅಡಿಪಾಯವಾಗಿರುವುದು ಗಂಡು ಹೆಣ್ಣಿನ ವ್ಯಾಮೋಹ, ಆಕರ್ಷಣೆ ಹಾಗೂ ತನ್ನದು ಎಂಬ ಸ್ವಾರ್ಥ. ಲಾಲಸೆಯು ಹಾಗೂ ಅರಿಷಡ್ವರ್ಗಗಳ ಭಾರವು ಸಾಂಸಾರಿಕ ಜೀವನದ ಅವಿಭಾಜ್ಯ ಅಂಗವಾಗಿದೆ. ಸಂಸಾರದ ಆಕರ್ಷಣೆ ತೊಡೆದುಹಾಕಿ ವೈರಾಗ್ಯದ ಮಜಲಿಗೆ ಏರುವ ಅರಿವಿನ ಚಿಂತನೆ ಅವಶ್ಯ.

ತತ್ವಪದಕಾರರು ತಮ್ಮ ಸಾಹಿತ್ಯದಲ್ಲಿ ವೈರಾಗ್ಯದ ಮಹೋನ್ನತಿಯನ್ನು ತಿಳಿಸಿದ್ದಾಗೆ ಹಾಗೇ ಸಂಸಾರದಲ್ಲಿ ಇದ್ದುಕೊಂಡು ಪಾರಮಾರ್ಥವನ್ನು ಗೆಲ್ಲಬೇಕು ಎಂಬುದು ಹಲವು ತತ್ವಪದಕಾರರ ಅಭಿಪ್ರಾಯವಾಗಿದೆ. ಮಾನವತ್ವದಿಂದ ದೈವತ್ವದೆಡೆಗೆ ಸಾಗಬೇಕು ಅದು ಸಂಸಾರವೆಂಬ ಮಾರ್ಗವನ್ನರಿತು. ತತ್ವಪದಕಾರರಲ್ಲಿ ಗೃಹಸ್ಥರು, ವೈರಾಗಿಗಳು ಕಂಡುಬರುತ್ತಾರೆ. ಸಹಜವಾಗಿ ತತ್ವಪದಗಳು ಸಂಸಾರದ ನಿರಸನವನ್ನು ಪ್ರಪಂಚ ನಶ್ವರತೆಯನ್ನು ಸಾರುತ್ತದೆ. ವಿರಕ್ತಿಯ ತತ್ವವನ್ನು 'ಸಂಸಾರವೆಂಬುದೊಂದು ಗಾಳಿ ಸೊಡರು' ಎಂಬ ತತ್ವದ ಮೇಲೆ ಸಾರಿದರು. ತತ್ವಪದಕಾರರಲ್ಲಿ ಅನೇಕರೂ ವೈರಾಗ್ಯದ ಪ್ರತಿರೂಪವಾದ ಅವಧೂತ, ಆರೂಢ, ಸಿದ್ಧ, ಸೂಫಿ ಪರಂಪರೆಯ ಸಾಧಕರಾಗಿದ್ದರು.

ತತ್ವಪದ ಸಾಹಿತ್ಯದಲ್ಲಿ ಸಂಸಾರ ಪಥದ ಕುರಿತು ವಿಶಿಷ್ಟವಾಗಿ ಹೇಳಲಾಗಿದೆ 'ಕೊಡಲೂರು ಬಸವಲಿಂಗಪ್ಪನವರ ಈ ತತ್ವಪದವು ಸಂಸಾರದ ನಿರಸನದ ಕುರಿತು ಈ ರೀತಿ ಇದೆ.

"ಸಾಕವ್ವ ಸಾಕು ಈ ಸಂಸಾರ

ಸುಡಲಿನ್ಯಾರಿಗೆ ಬೇಕು

ಸಾಕವ್ವ ಸಾಕು

ಮಡದಿ ಮಕ್ಕಳು ಮನೆ ಒಡವೆಗಳೆಲ್ಲ

ಸುಡಲಿಡು ಯಾರದು ಎನಲಿಲ್ಲ

ಹಡೆದಂಥ ತಾಯ್ತಂದೆ ಬಳಗವು ಎಲ್ಲ

ಒಡ ಹುಟ್ಟಿದ ಅಣ್ಣ ತಮ್ಮಂದಿರೆಲ್ಲ

ಬಿಡದೆ ಬಂದು ಯಮನನ್ನನು ಜಡಿವಾಗ

ಎಡಬಲದಿ ನಿಂತು ಬರಿ ಮಿಡುಕುವನಲ್ಲಾ"

ಕೊಡಲೂರು ಬಸವಲಿಂಗಪ್ಪನವರು ಜನಪದೀಯ ಭಾಷಾ ಶೈಲಿಯಲ್ಲಿ ಈ ತತ್ವಪದವನ್ನು ರಚಿಸಿದ್ದಾರೆ. ಸಂಸಾರದ ಭವ-ಬಂಧನ ಸಾಕಾಗಿದ್ದು, ಸಂಸಾರವೆಂಬುದು ಬೆಂಕಿಯು ಸುಡುವಂತೆ ತಮ್ಮನ್ನು ಸುಡುತ್ತಿದೆ ಎಂದು ಸಂಸಾರ ನಿರಸನವನ್ನು ಸಾರಿದ್ದಾರೆ. ಮನುಷ್ಯನು ಕಾಲವಾಗುವ ಸಮಯ ಬಂದಾಗ ಅವನನ್ನು ಮನೆ, ಹೆಂಡತಿ, ಮಕ್ಕಳು, ಆಸ್ತಿ, ಆಭರಣ ಯಾವುದು ಮರಣವನ್ನು ತಪ್ಪಿಸಲು ಸಾಧ್ಯವಿಲ್ಲ. ತಂದೆ-ತಾಯಿ, ಅಣ್ಣ, ತಮ್ಮ, ಬಂಧು-ಬಳಗ ವ್ಯಕ್ತಿಯು ಮರಣ ಹೊಂದುವಾಗ ಮಿಡುಕುವರು ಹೊರತು ಯಮನ ದವಡೆಯಿಂದ ತಪ್ಪಿಸಲು ಸಾಧ್ಯವಿಲ್ಲ. ಸ್ವಾರ್ಥ, ಲೋಭದಿಂದ ಸಂಗ್ರಹಿಸಿದ ಆಸ್ತಿಯು ನಶ್ವರವಾದದ್ದು ಆಧ್ಯಾತ್ಮವಾದಿಗಳು ಸಂಸಾರದ ಭವಬಂಧನದಿಂದ ದೂರವಾಗಬೇಕು ಎಂಬುದು ಕೊಡಲೂರು ಬಸವಲಿಂಗಪ್ಪನವರ ತತ್ವಪದ ಆಶಯವಾಗಿದೆ.

ಚಂದ್ರಪ್ಪನವರ ತತ್ವಪದದಲ್ಲಿ ಸಂಸಾರದ ಕುರಿತು ಹೀಗೆ ಹೇಳಿದ್ದಾರೆ.

"ಸಂಸಾರವೆಂಬು ಸಂತಿ ಸೆಳವಿಗೆ ಎಂತೆಂಥವರು ಮುಳುಗಿ ಹೋಗುವಾಗ

ಭ್ರಾಂತಿ ಭ್ರಮದ ದೋಷ ಹೋಯಿತೊ

ಮರವಿ ಮಂದಿರಕ್ಕೆಲ್ಲಾ ಮಾಯಾವಾಯಿತೊ

ತಲೆಕೆಳಗ ಕಾಲಮ್ಯಾಗ ಮಾಡಿ ನಮಗ ತೋರಸ್ತದೆ

ನಮ್ಮದು ನಮಗ ತಿಳಿಯದಾಯಿತೊ

ಮಾಯಿ ಛಾಯಕ್ಕಾಗಿ ಮಾನವಾ

ನಾಯಿಗತಿ ನಾಟಗಿಲ್ದ ನೋಡ ನೋಡ ಈಡಾಯಿತೊ

ಖೋಡಿ ಬಂಡ ರಂಡೆಗಂಡಾಯಿತೊ" ॥೧॥

ಚಂದಪ್ಪನವರ ತತ್ವಪದದಲ್ಲಿ ಸಂಸಾರವೆಂಬುದು ಮಿಥ್ಯ, ಪಾರಮಾರ್ಥಿಕವೇ ಸತ್ಯ, ಸಂಸಾರದ ಕ್ಷಣಿಕತೆ, ಆಧ್ಯಾತ್ಮದ ಉತ್ಕಟತೆ ಈ ತತ್ವಪದದಲ್ಲಿ ಕಂಡುಬರುತ್ತವೆ. ಸಂಸಾರದಲ್ಲಿ ಇರುವ ವ್ಯಕ್ತಿಯು ವ್ಯಾಮೋಹ ಮತ್ತು ಭೊಗಗಳ ಸೆಳತಕ್ಕೆ ಒಳಗಾಗಿ ಈ ಸಂಸಾರವೆಂಬ ಪ್ರವಾಹದ ಸುಳಿಗೆ ಸಿಕ್ಕಿ ಆತ್ಮ ಜ್ಞಾನದ ಮೂಲಕ ಅಂತರಾತ್ಮವನ್ನು ಅರಿಯದೇ ಸಿಲುಕಿಕೊಳ್ಳುವುದು. ಜೀವನದ ವಾಸ್ತವಿಕತೆಯನ್ನು ಅರಿಯದೆ ಭ್ರಾಂತಿಯಲ್ಲಿ, ಭ್ರಮೆಯಲ್ಲಿ ಬದುಕುವನ್ನು ದೈವದ ನಿಜಸ್ವರೂಪವನ್ನರಿಯದೇ ಪಾರಾಮಾರ್ಥದ ನಿಜ ಸುಖವನ್ನು ತಿಳಿಯದೆ ಬದುಕು ಒಗಟಿನ ಪ್ರಶ್ನೆಯಾಗಿ ಗೋಚರವಾಗುತ್ತದೆ. ಸಂಸಾರದ ಮಿಥ್ಯ ಸ್ವರೂಪವು ತಲೆಕೆಳಗೆ ಮಾಡಿ ಕಾಲು ಮೇಲೆ ಮಾಡಿ ತೋರಿಸುತ್ತದೆ. ಐಹಿಕ ಬದುಕಿನ ಈ ಸ್ಥಿತಿಯನ್ನು ಹಾಗೂ ಪ್ರಪಂಚದ ನಿತ್ಯ ಸ್ವರೂಪವನ್ನು ಆಧ್ಯಾತ್ಮದ ಸತ್ಯ ಸ್ವರೂಪವನ್ನು ಜ್ಞಾನಿಯಾದವನು ಅರಿಯಬೇಕು. ಲೌಕಿಕ ಮತ್ತು ಪಾರಾಮಾರ್ಥದ ಅಂತರಗತ ಛಾಯೆಯನ್ನು, ಮಾಯೆಯನ್ನು ಅರಿಯದ ಮನುಷ್ಯನ ಬದುಕು ಶ್ವಾನದ ಬದುಕಿನಂತೆ ಎಂದು ತತ್ವಪದಕಾರರು ಸಾರಿದ್ದಾರೆ.

ಸಂಸಾರದ ಕುರಿತು ಅವಧೂತ ಮಾರ್ಗದ ಯೋಗಿ ಶರೀಫರ ಚಿಂತನೆ ವಿಶಿಷ್ಟವಾದದ್ದು.

ಸಂಸಾರದ ಗೊಡವೆ ಇನ್ಯಾಕೆ। ಇನ್ಯಾರಿಗೆ ಬೇಕೋ ॥ಪ॥

ಭವಸಾಗರದೊಳು ಸಂಸಾರದ ಗೊಡವೆ ಇನ್ಯಾಕೆ ।

ನಮನವಯುತಿರಲು ಯಮ ತಾನು ಕೊಲುವಾಗ ॥೧॥

ಒಂಟೆಯ ಮೇಲೆ ಹತ್ತಿದೆನವ್ವಾ ಹತ್ತಿ ।

ಘಂಟೆಯ ನುಡಿಸಿದೆ ನನ ತಾಯವ್ವಾ ।

ಕಂಟಕಗಳ ಪರಿಹರಿಸಿ ಸುಂಟರಗಾಳಿಯ ದಾಟಿ ನಡೆದು

ಮತ್ತೆಂಟು ಕೋಟೆಯ ಸಂಪೂರ್ಣ ಗೆದ್ದೆ ॥೨॥

ಮಂದಿಯೋಳು ಮಾನಕುಂಜತಲಿ ।

ಸಂದಿ ಸಂದಿಯೋಳು ಸುಳಿದಾಡುತಲಿ

ಬಂದರು ಶಿಶುನಾಳ ತಂದೆಯ ಕಾಣಲು ।

ಹೊಂದಿದ್ದೆನಾತನ ದ್ವಂದ್ವ ಚರಣಕ್ಕೆ ॥೩॥

ಶಿಶುನಾಳ ಶರೀಫರು ಸಂಸಾರಿಕ ಜೀವನದ ಭವ=ಬಂಧನಗಳು ಸಾಗರವಿದ್ದಂತೆ ಇಲ್ಲಿ ಈಜಲು ಕಷ್ಟ, ಇರಲು ಕಷ್ಟ ಈ ಸಂಸಾರದ ಗೊಡವೆ ತಮಗೆ ಬೇಡವೆಂದೂ ಹೇಳುತ್ತಾರೆ. ಶರೀಫರು ಆರೂಢ ಮಾರ್ಗಿಯಾದವರು ಸಂಸಾರದ ಕಷ್ಟ–ಸುಖ ಅರಿತವರು. ಸಂಸಾರವೆಂಬುವುದಕ್ಕಿಂತ ಆಧ್ಯಾತ್ಮವು ಶ್ರೇಷ್ಠ ಎಂಬ ಧೋರಣೆಯನ್ನು ಹೊಂದಿದ್ದರು. ಈ ಸಂಸಾರದ ಪಥವು ಅನೇಕ ಮಾನಸಿಕ ಭಾದೆಗೆ ಕಾರಣವಾಗುತ್ತದೆ. ಆದರೆ ಪಾರಮಾರ್ಥಿಕ ಚಿಂತನೆಯು ಮನಸ್ಸಿಗೆ ನೆಮ್ಮದಿ ನೀಡುತ್ತದೆ. ಸಮಾಜದ ಅಂಧ ಕಟ್ಟು ಪಾಡುಗಳಿಗೆ ಮನುಷ್ಯ ಅಂಜಬೇಕು. ಸಮಾಜದ ಮೌಢ್ಯಗಳು ಮನುಷ್ಯನ ಸುತ್ತಲೂ ಇವೆ ಈ ಮೌಢ್ಯಗಳು ಅಂಧ ಕಟ್ಟು ಪಾಡುಗಳನ್ನು ತೊರೆಯಬೇಕು. ಅಲೌಕಿಕದ ದಾರಿಯಲ್ಲಿ ಸಾಗಲು ಸುತ್ತಲೂ ಕೋಟೆಯಂತಿರುವ ಅಷ್ಟ ಮಧಗಳಾದ ಧನ, ಕುಲ, ವಿದ್ಯೆ, ರೂಪ, ಯೌವ್ವನ, ಬಲ, ಪರಿವಾರ, ಅಧಿಕಾರ ಇವುಗಳನ್ನು ಗೆಲ್ಲಬೇಕು ಈ ಅಷ್ಟ ಮಧಗಳು ಅಹಂಕಾರಕ್ಕೆ ಕಾರಣವಾಗುತ್ತವೆ.

ಅಹಂಕಾರದ ಈ ಸಂಸಾರವನ್ನು ತೊರೆದು ಆಧ್ಯಾತ್ಮವನ್ನು ಹರಸುತ್ತ ಶಿಶುನಾಳದೀಶನೆಂಬ ಪಾರಮಾರ್ಥದ ಚರಣದಲ್ಲಿ ಲೀನವಾಗಬೇಕು ಎಂಬುದು ಶರೀಫರ ಚಿಂತನೆಯಾಗಿದೆ.

ನೀರಲಕೇರಿ ಬಸವಲಿಂಗಪ್ಪನವರ ತತ್ವಪದದಲ್ಲಿ ಸಂಸಾರದ ನಿರಶನವನ್ನು ಕಾಣಬಹುದು.

ಏನು ಸಂಸಾರ

ಏನು ಸಂಸಾರ ಸುಖದ ಅರ್ತಿ

ಹೀನ ವಿಷಯಂಗಳೊಳು ಬೆರೆತಿ ॥ಪ॥

ಸ್ವಾನುಭಾವವ ಮೆರೆತಿ

ಕಾನನವ ಹೊಕ್ಕು ಇರತಿ

ಮಾನಗೆಡಿಸುವ ನಿಯಮ

ವೇನು ಮುಂದೆ ಅಪಕೀರ್ತಿ ॥೧॥

ಆರು ನಾನೆಮದು ಅರಿಯಲಿಲ್ಲ

ನಾರಿಸುತ್ತ ನಿಲಯಾದಿಗಳ ನೆಚ್ಚಿದೆಯಲ್ಲ

ಸೇರಿ ಸತ್ ಶರಣರ ಅಡಿದಾವರೆಯಾ ಮೆರೆದೆಯಲ್ಲ

ಪಾರಮಾರ್ಥ ಪ್ರಭಾವ ದೊರೆಯಲಿಲ್ಲ ॥೨॥

ಶಿವನ ನೆನೆಯದ ಶೀಲವಂತ

ಭುವನದೊಳು ಬಂದು ಮಾಡಿದುದೇನು ಭ್ರಾಂತ

ನವಿದುಂಡಿ ಹಸಿವಿಗಾಲ್ಪರಿದು ಹುಳಿ ಸವಿಯಂತ

ಭವಭವದಿ ಬಳಲಿ ಬಾಯಾರಿ ಕೆಡುತಿರುವಂಥ

ಸಂಸಾರವೆಂಬ ಸುಖದ ದಾರಿಯಲ್ಲಿ ಪಾರಮಾರ್ಥದ ನಿಜ ಸುಖವನ್ನು ಮನುಷ್ಯ ಪಡೆಯಲಿಲ್ಲ. ಮಿಥ್ಯವಾದ ಭೋಗಲಾಲಸ್ಯಗಳನ್ನು ಅನುಭವಿಸಿ ಇಂದ್ರಿಯ ಸುಖದಲ್ಲಿ ತಲ್ಲೀನನಾಗಿ ಈ ಇಂದ್ರಿಯ ಸುಖವು ಮುಂದೆ ವಿಷವಾಗಿ ಪರಿಣಮಿಸುವುದು ಎಂಬುದನ್ನು ಮರೆಯುತ್ತಾನೆ.

ಅಂತರಾತ್ಮದ ಜ್ಞಾನ ಅರಿಯದೆ ಲೌಕಿಕದಲ್ಲಿ ಅವಮಾನ ಅಪಕೀರ್ತಿಯನ್ನು ಪಡೆಯುತ್ತಾರೆ. ತತ್ವಪದಕಾರರ ದೃಷ್ಟಿಯಲ್ಲಿ ಲೌಕಿಕದ ಚಿಂತನೆಗಳು ಮನುಷ್ಯನಲ್ಲಿ ಸಂಕುಚಿತ ಮನೋಭಾವನೆಯ ಉಂಟುಮಾಡಿ ಆಧ್ಯಾತ್ಮದ ಚಿಂತನೆಗೆ ಅಡ್ಡಿಯಾಗುವುದು ಎಂಬುದು ತತ್ವಪದಕಾರರ ಅಭಿಪ್ರಾಯವಾಗಿದೆ.

ಕಾಮ, ಕ್ರೋಧ, ಮದ, ಮತ್ಸರ, ಲೋಭ, ಮೋಹಗಳಿಂದ ಕೂಡಿದ ಸಂಸಾರದಲ್ಲಿ ತಾನು ಯಾರು ಎಂಬ ಆತ್ಮದ ಅರಿವು ಪಡೆಯಲಿಲ್ಲ ಎನ್ನುವುದು ತತ್ವಪದಕಾರರ ಇಂಗಿತವಾಗಿದೆ. ಲೌಕಿಕದಿಂದ ಮನುಷ್ಯ ಕಷ್ಟ ನೋವುಗಳಿಗೆ ಒಳಗಾಗಿ ವ್ಯಥೆಪಡುತ್ತಾನೆ. ಶರಣರ ಸಂಘದಿಂದ ಪಾರಮಾರ್ಥದ ಚಿಂತನೆಯ ದರ್ಶನವಾಗುತ್ತದೆ. ಮನುಷ್ಯ ಶಿವ (ದೇವರನ್ನು) ನೆನೆಯದೆ ಮುಡಿ ಮೈಲಿಗೆಯಂದು ಶೀಲವಂತರೆಂದು ಬದುಕಿದರೆ ಆ ಬದುಕು ಅನರ್ಥಕವಾಗುತ್ತದೆ. ಪಾರಮಾರ್ಥದ

ಆಗಮ್ಯ ಚೈತನ್ಯ ಶಕ್ತಿಯನ್ನು ಅರಿಯಬೇಕೆಂಬುದು ತತ್ವಪದಕಾರರ ಆಶಯವಾಗಿದೆ. ಲೌಕಿಕದ ತೃಷಿಯಿಂದ ಮನುಷ್ಯನು ಬಳಲುವನು. ಲೌಕಿಕದ ತೃಷಿಯನ್ನು ತಣಿಸಿ ಆಧ್ಯಾತ್ಮದ ಪರಮಾನಂದವನ್ನು ಸೇವಿಸಬೇಕು ಎಂಬುದು ಈ ಯೋಗಿಗಳ ಚಿಂತನೆಯಾಗಿದೆ.

ರಾಮಪೂರದ ಬಕ್ಕಪ್ಪನವರ ಈ ತತ್ವಪದದಲ್ಲಿ ಸಂಸಾರದಲ್ಲಿನ ಆಸೆಯಿಂದ ಸಂಪತ್ತಿನ ಕ್ರೂಢಿಕರಣವನ್ನು ಹಲವು ಸಂಕೇತಗಳ ಮೂಲಕ ಹಾಡಿದ್ದಾರೆ.

ಸಾಕಾಗಿತು ಯವ್ವಾ ಸಂಸಾರ
ಬೇಕಾಗಿಲ್ಲ ತಾಯಿ ನನಗ ಪೂರ
ಅತ್ತಿಯ ಮನಿಯಲ್ಲಿ ರೊಟ್ಟಿ ಮಾಡುತ್ತಿದ್ದೆ ।
ಪುಟ್ಯಾಗ ಎರಡು ಇಟ್ಟಿದ್ದೇನತ್ತಿ ।
ಎಟ್ಟಿಗಂಡ ಬಂದ ಸಿಟ್ಟಿಲೆ ಹೊಡೆದರೆ ।
ರೊಟ್ಟಿ ಕದ್ದದ್ದು ಕುಳವೇನತ್ತಿ
ಅಡಗಿ ಮನೆಯಲ್ಲಿ ಕಡಬು ಕರಿಯುತ್ತಿದ್ದೆ
ಗಡಿಗ್ಯಾಗ ಎರಡು ಇಟ್ಟಿದ್ದೇನತ್ತಿ
ಗಡಿಬಿಡಿ ಗಂಡ ಬಂದ ಬಡಿಗಿಲಿ ಹೊಡೆದರೆ
ಕಡಬು ಕದ್ದದ್ದು ಕಳುವೇನತ್ತಿ ।
ಮ್ಯಾಳಿಗಿ ಮನೆಯಲ್ಲಿ ಹೋಳಿಗಿ ಮಾಡುತ್ತಿದ್ದೆ
ಜೋಳಿಗ್ಯಾಗ ಎರಡು ಇಟ್ಟಿದ್ದೇನತ್ತಿ
ಬಾಳವೇಗೇಡಿ ಗಂಡ ಬಂದು
ಮೇಳಿಲೇ ಹೊಡೆದರೆ
ಹೋಳಿಗಿ ಕದ್ದದ್ದು ಕಳುವೇನತ್ತಿ ।
ಭೀಮಪುರದಲ್ಲಿರುವ ರಾಮಪೂರ ಬಕ್ಕ
ಅಕೀನ ನೋಡಿ ಅವ ನಕ್ಕ

ಅದನ್ನು ನಾನು ನೋಡಿದೆನವ್ವಾ ಪಕ್ಕ

ನೋಡಿ ನನಗ ಬಂತವ್ವ ದುಃಖ ।

ರಾಮಪೂರದ ಬಕ್ಕಪ್ಪನವರು ಈ ತತ್ವಪದದಲ್ಲಿ ಅತ್ತೆಯ ಮನೆಯನ್ನು ಲೌಕಿಕಕ್ಕೂ (ಸಂಸಾರ) ಗಂಡನ್ನು ಆಧ್ಯಾತ್ಮಕ್ಕೂ ರೊಟ್ಟಿ, ಕಡಬು, ಹೋಳಿಗೆಯನ್ನು ಲೋಭಕ್ಕೂ ಹೊಲಿಕೆ ಮಾಡಿದ್ದಾರೆ. ರೊಟ್ಟಿಯನ್ನು ಕದಿಯುವುದು ಎಂಬುದು ಸಂಪತ್ತನ್ನು ಸಂಗ್ರಹಿಸುವುದು ಎಂದು ಅರ್ಥ. ಅತಿಯಾದ ಆಸೆಯಿಂದ ತನಗೂ ತನ್ನ ಮಕ್ಕಳಿಗೂ ಸಂಪತ್ತು ಬೇಕು ಎಂಬ ಸ್ವಾರ್ಥದಿಂದ ಅಡ್ಡದಾರಿಯಲ್ಲಿ ಸಂಪಾದನೆ ಮಾಡುವುದು ಕಳ್ಳತನ ಎಂಬುದು ತತ್ವಪದದಕಾರರ ಅಭಿಪ್ರಾಯ. ಸಂಸಾರದ ಮೇಲಿನ ವ್ಯಾಮೋಹದಿಂದ ಮನುಷ್ಯ ಭೂಮಿ, ಹಣ, ಆಭರಣ ಸಂಗ್ರಹಿಸುವನು ರೊಟ್ಟಿ ಸಂಕೇತವು ಭೂಮಿಗೆ ಕಡಬು ಎಂಬ ಸಂಕೇತವು ಆಭರಣಕ್ಕೆ ಹೋಳಿಗೆ ಎಂಬ ಸಂಕೇತವನ್ನು ಹಣಕ್ಕೂ ಸಾಮ್ಯತೆ ಮಾಡಿ ತತ್ವಪದ ರಚಿಸಿದ್ದಾರೆ. ಈ ನಶ್ವರವಾದ ಲೌಕಿಕದಲ್ಲಿ ಅದು ಯಾವುದು ಶಾಶ್ವತವಲ್ಲ ಮನುಷ್ಯನ ಈ ಆಸೆ ಆಕಾಂಕ್ಷೆಗಳನ್ನು ಈ ನಶ್ವರ ಸಂಸಾರವನ್ನು ಹಾಗೂ ಸಂಪತ್ತಿನ ವ್ಯಾಮೋಹದಿಂದ ಭೋಗ ಜೀವನ ನಡೆಸುವ ಜನರನ್ನು ನೋಡಿ ಆತ್ಮ ಚೈತನ್ಯನಾದ ರಾಮಪೂರದ ಬಕ್ಕ ನಗುವನು. ಜನರ ಈ ಸ್ಥಿತಿಯನ್ನು ಕಂಡು ದುಃಖ ಪಡುವೆನು ಎಂದು ಬಕ್ಕಪ್ಪನವರು ಮರುಗುತ್ತಾರೆ.

ಮೋಟ್ನಳ್ಳಿ ಹಸನಸಾಬರವರು ಸಂಸಾರವನ್ನು ಸಂತೆಗೆ ಹೋಲಿಸಿದ್ದಾರೆ.

"ಸಂತಿ ಸಂಸಾರ ನೋಡಣ್ಣ ನಿನ

ಸ್ವತ್ತು ಮಾರಿಕೊಂಡ್ಹೋಗಣ್ಣ

ಸಂತಿಗಿ ಬಂದಿದೆ ಚಿಂತ್ಯಾಕೊ

ಶಿವನ್ಯಾಕ ಬೈತಿದಿ ಸೆಂಟರಿಲಾ ಕೋ"

ತತ್ವಪದಕಾರರು ತಾವು ನಿತ್ಯ ಅನುಭವಿಸುವ ಅನುಭವಗಳ ಮೂಲಕ ಹಲವು ರೂಪಕ ಸಂಕೇತಗಳ ಮೂಲಕ ತತ್ವಪದಗಳನ್ನು ರಚಿಸಿದ್ದಾರೆ. ಈ ಸಂಸಾರವೆಂಬುದು ಸಂತೆಯಂತೆ. ಇಲ್ಲಿ ಶಬ್ದಗಳ ಕರ್ಕಶ ಇದೆ ಜನ ಜಂಗುಳಿ ಇದೆ. ಲೋಭ, ಮೋಹಗಳಿಂದ ಕೂಡಿದೆ. ಈ ಸಂಸಾರದಲ್ಲಿ ಮನುಷ್ಯ ತನ್ನ ತಪ್ಪುಗಳಿಗೆ ದೇವರನ್ನು ಜರಿಯುತ್ತಾನೆ. ದೇವರನ್ನು ಜರಿಯದೆ ಹುಟ್ಟಿನಿಂದ

ಸಂಪುಟ 1, ಸಂಚಿಕೆ 2, ಸೆಪ್ಟಂಬರ್ 2022, ಪುಟಗಳು 23 – 30

ಸಾವಿನವರೆಗೂ ಇರುವ ಈ ಸಂತೆಯಲ್ಲಿ ಪ್ರೀತಿ–ವಿಶ್ವಾಸ ಮಾನವತ್ವ ಗುಣಗಳನ್ನು ಹಂಚಿ ಹೋಗಬೇಕು ಎಂಬುದು ಈ ತತ್ವಪದಕಾರರ ಅಭಿಪ್ರಾಯವಾಗಿದೆ.

ಮಾನವ ಸಂಘ ಜೀವಿ ಸಮಾಜ ಜೀವಿ ಸಂಘಟನೆಯಿಲ್ಲದೆ ಯಾವ ವ್ಯಕ್ತಿಉ ಬದುಕಲಾರರು. ಈ ಸಂಸಾರ ಸಾಗಲು ಮನೆ, ಹೆಂಡತಿ, ಮಕ್ಕಳು, ಬಂಧುಗಳು, ಆಸ್ತಿ, ಅಂತಸ್ತು ಈ ಅಂಶಗಳು ಜೀವನದ ಸಾರ್ಥಕತೆ ಎಂದು ದೃಢವಾದ ನಂಬಿಕೆಯಿಂದ ಅವುಗಳನ್ನು ಮನಪೂರ್ವಕವಾಗಿ ಅನುಷ್ಠಾನಗೊಳಿಸಲು ಪ್ರಯತ್ನಿಸುತ್ತಾನೆ. ಆದರೆ ಮನುಷ್ಯನ ಬದುಕು ಹಲವು ತಿರುವುಗಳ ಮೂಲಕ ಅನುಭವಗಳ, ಚಿಂತನೆಗಳ ಮೂಲಕ ಅನುಭಾವಕ್ಕೆ ಒಳಗಾಗುತ್ತಾನೆ. ಹೀಗೆ ಒಳಪಟ್ಟ ಅನುಭಾವದ ಸ್ಥಿತಿಯಲ್ಲಿ ಸಂಸಾರವು ಹೇಯ್ಯವಾಗುತ್ತದೆ. ಆಗ ಆಧ್ಯಾತ್ಮದ ಕಡೆಗೆ, ಪಾರಶಕ್ತಿಯ ಕಡೆಗೆ, ಪರಿಸರದ ಅಗೋಚರ ಶಕ್ತಿಯ ಕಡೆಗೆ ಶರಣಾಗುತ್ತಾನೆ.

ಸಂಸಾರವನ್ನು ಧಿಕ್ಕರಿಸಿ ಶಾಶ್ವತ ಸುಖಕ್ಕೆ ಹವಣಿಸುತ್ತಾನೆ ಹೀಗೆ ಹವಣಿಸಿದ ಬಹುತೇಕರು ತಮ್ಮ ಅನುಭವದ ಮೂಲಕ ಸಂಸಾರದ ಕ್ಷಣಿಕತೆ, ಆಧ್ಯಾತ್ಮದ ಉತ್ಕಟತೆಯನ್ನು ತತ್ವಪದಗಳ ಮೂಲಕ ನಿರೂಪಿಸಿದ್ದಾರೆ. ತತ್ವಪದಕಾರರಿಗೆ ಇಹದ ಕ್ಷಣಗಳು ತಾತ್ಕಾಲಿಕವಾಗಿತ್ತು. ಪಾರಮಾರ್ಥಿಕ ಶಾಶ್ವತ ಎಂಬುದುನ್ನು ತಮ್ಮ ತತ್ವಪದಗಳಲ್ಲಿ ಬೋಧಿಸಿದರು. ಜಗತ್ತೇ ತಮ್ಮ ಮನೆಯೆಂದು ಜಗತ್ತಿನ ಜನರೆಲ್ಲರೂ ತಮ್ಮ ಬಂಧುಗಳು ಎಂಬ ಪರಿಕಲ್ಪನೆಯಲ್ಲಿ ತತ್ವಪದಗಳನ್ನು ರಚಿಸಿದರು. ಸಂಕುಚಿತವಾದ ಮನೆ, ಮಡದಿ, ಮಕ್ಕಳು ಎಂಬುದನ್ನು ತೊರೆದು ಜಗವೇ ಒಂದು ಮನೆ ಎಂಬ ವಿಶಾಲ ಚಿಂತನೆಯನ್ನು ತತ್ವಪದಗಳಲ್ಲಿ ಹಲವು ಸಂಕೇತ, ರೂಪಕಗಳ ಮೂಲಕ ನಿರೂಪಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು**

೧. ತತ್ವಪದ ಸಾಹಿತ್ಯ ಅಧ್ಯಯನ., ಅಮರೇಶ ನುಗಡೋಣಿ., ೨೦೧೪., ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ರಾಂಪೂರದ ಬಕ್ಕಪ್ಪ ಮತ್ತು ಇತರರ ತತ್ವಪದಗಳು., ಕೆ. ನೀಲಾ., ೨೦೧೭., ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೨

೩. ಕೂಡ್ಲೂರು ಬಸವಲಿಂಗರ ತತ್ವಪದಗಳು – ಡಿ.ಎಸ್. ಕುಮಾರ್

೪. ರಾಯಚೂರು ಜಿಲ್ಲೆಯ ತತ್ವಪದಕಾರರು – ಡಾ. ವ್ಹಿ.ಜಿ. ಪೂಜಾರ್

೫. ಕನ್ನಡ ಅನುಭಾವ ಸಾಹಿತ್ಯ – ಪ್ರೊ. ಎಸ್.ಎಂ. ಹಿರೇಮಠ